**ದಿಃ28.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಗೆ ಪುನಃ ಕರೆಯಿಸಲಾಯಿತು.
**ಪಾಟೀ ಸವಾಲುಃ-**ವಾದಿ ಪರ ಶ್ರೀ**. P.V.K.,**ವಕೀಲರಿಂದಃ-

ವಾದಿಗಳ ಅಜ್ಜನ ಹೆಸರು ಜೆ ಎನ್ ಹನುಮಂತಪ್ಪ ಇರುತ್ತದೆ ಎಂದರೆ ಸರಿ. ಸದರಿ ಜೆ ಎನ್ ಹನುಮಂತಪ್ಪಗೇ ನರಸಿಂಗಪ್ಪ, ರಾಮಪ್ಪ, ಭೀಮಪ್ಪ ಮತ್ತು ಬಸವರಾಜ್ ಎಂಬುವ ನಾಲ್ಕು ಜನ ಮಕ್ಕಳು ಇರುತಾರೆ ಎಂದರೆ ಸರಿ. ವಾದಿಗಳು ಸದರಿ ಭೀಮಪ್ಪ ನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಭೀಮಪ್ಪನ ಹೆಂಡತಿ ಹೆಸರು ಶಂಕ್ರಮ್ಮ ಇರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 88/ಪಿ ಒಟ್ಟು ವಿಸ್ತೀರ್ಣ 12 ಎಕರೆ 28 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ ಜಮೀನು ವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಿತ್ರಾರ್ಜಿತ ಆಸ್ತಿಯನ್ನು ಹನುಮಂತಪ್ಪ ಮತ್ತು ಆತನ ಹೆಂಡತಿ ಲಕ್ಷಮ್ಮ ಅವರು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದರಂತೆ ಭೀಮಪ್ಪ ಅವರಿಗೆ 2 ಎಕರೆ 25 ಗುಂಟೆ ಪಾಲು ಬಂದಿರುತ್ತದೆ ಎಂದರೆ ಸರಿ. ಸದರಿ 2 ಎಕರೆ 25 ಗುಂಟೆ ಜಮೀನಿನಲ್ಲಿ ಭೀಮಪ್ಪ ಮತ್ತು ವಾದಿ ಮತ್ತು ಪ್ರತಿವಾದಿ 2 ಅವರು ಸಾಯುವವರೆಗೂ ಕೂಡ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಭೀಮಪ್ಪ ರವರ ಕುಟುಂಬದ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ . ಭೀಮಪ್ಪ ಕುಟುಂಬದ ಆಸ್ತಿಗಳಿಗೆ ಅವರ ಮಕ್ಕಳ ನಡುವೆ ಪಾಲುವಿಭಾಗ ಆಗಿದ್ದ ಬಗ್ಗೆ ನನಗೆ ಗೋತ್ತಿರುತ್ತದೆ . ಅವರು ದಾಖಲೆ ಮೂಲಕ ಪಾಲುವಿಭಾಗ ಮಾಡಿಕೊಂಡಿರುತ್ತಾರೆ . ಸದರಿ ಪಾಲುವಿಭಾಗ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ . ನಾನು ಜಗಳೂರಿನಲ್ಲಿ ತುಂಬಾ ಆಸ್ತಿವುಳ್ಳ ವ್ಯಕ್ತಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಇದೇ ನ್ಯಾಯಾಲಯದಲ್ಲಿ ಹಣಕಾಸಿನ ವಸೂಲಾತಿ ದಾವೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಗಳಿಗೆ ನ್ಯಾಯಾಲಯಕ್ಕೆ ಒಡಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಗಳನ್ನುಸಲ್ಲಿಸಿ ನ್ಯಾಯಾಲಯಕ್ಕೆ ಒಡಾಡುತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಹೆಸರು ದೊಡ್ಡಸಿದ್ದಪ್ಪ ಇರುತ್ತದೆ ಎಂದರೆ

ಸರಿ. ಅವರಿಗೆ ಅಡ್ಡ ಹೆಸರು ಬಡ್ಡಿ ಸಿದ್ದಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ತಂದೆ ಹಣಕಾಸಿನ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ನಾನು ಸಾಲ ನೀಡುವಾಗ ಜನರಿಂದ ಭದ್ರತೆಗೆ ಕೆಲವು ದಾಖಲೆಗಳನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿ. ನಾನು ಭೀಮಪ್ಪ ಅವರಿಗೆ ಸಾಲವನ್ನು ನೀಡಿರುವುದಿಲ್ಲ. ಸದರಿ ಭೀಮಪ್ಪ ಅವರು ತಮ್ಮ ಮನೆತನದ ಜವಬ್ದಾರಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ಭೀಮಪ್ಪ ಅವರ ಊರು ಜಗಳೂರು ಇರುತ್ತದೆ . ಅವರ ಮನೆತನದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ .

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು